# ಜನಪದ ಸಾಹಿತ್ಯದ ಮೇಲೆ ಆಧುನಿಕ ಮಾಧ್ಯಮಗಳ ಪ್ರಭಾವ

ಶಿಲ್ಪ ಬಿ.

ಸಹಾಯಕ ಪ್ರಾಧ್ಯಾಪಕರು, ನ್ಯೂ ಎಕ್ಸ್‌ಪರ್ಟ್ ಕಾಲೇಜು, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

DOI: https://doi.org/10.5281/zenodo.18785503

## ABSTRACT:

ಜನಪದ ಸಾಹಿತ್ಯವು ಸಂಸ್ಕೃತಿಯ ಮೂಲ ಬೇರಾಗಿದ್ದು, ಆಧುನಿಕ ಮಾಧ್ಯಮಗಳ ಪ್ರಭಾವದಿಂದಾಗಿ ಮಹತ್ವದ ಪಲ್ಲಟಗಳನ್ನು ಕಾಣುತ್ತಿದೆ. ಮುದ್ರಣ, ದೃಶ್ಯ ಮತ್ತು ಸಾಮಾಜಿಕ ಜಾಲತಾಣಗಳು ಜನಪದ ಕಲೆಗಳನ್ನು ಜಾಗತಿಕ ಮಟ್ಟಕ್ಕೆ ತಲುಪಿಸಿ, ಕಲಾವಿದರಿಗೆ ಆರ್ಥಿಕ ಮತ್ತು ಪ್ರಚಾರದ ನೆರವು ನೀಡಿವೆ. ಆದರೆ, ಅವಿಭಕ್ತ ಕುಟುಂಬಗಳ ವಿಘಟನೆ ಮತ್ತು ಮೊಬೈಲ್ ಸಂಸ್ಕೃತಿಯಿಂದಾಗಿ 'ಹೇಳುಗ-ಕೇಳುಗ' ಪರಂಪರೆ ನಶಿಸಿ, 'ನೋಡುಗ' ಪರಂಪರೆ ಬೆಳೆದಿದೆ. ಯಕ್ಷಗಾನದಂತಹ ಕಲೆಗಳು ವ್ಯಾಪಾರೀಕರಣಗೊಂಡು ತಮ್ಮ ಮೂಲ ಸ್ವರೂಪ ಹಾಗೂ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕಳೆದುಕೊಳ್ಳುವ ಆತಂಕವನ್ನು ಇಲ್ಲಿ ಚರ್ಚಿಸಲಾಗಿದೆ. ಪರಂಪರೆ ಮತ್ತು ಆಧುನಿಕತೆಯ ನಡುವೆ ಸಮನ್ವಯ ಸಾಧಿಸುವ ಮೂಲಕ ಜನಪದದ ಮೌಲ್ಯಗಳನ್ನು ಉಳಿಸಿಕೊಳ್ಳುವ ಅಗತ್ಯವನ್ನು ಲೇಖನ ಪ್ರತಿಪಾದಿಸುತ್ತದೆ.

## KEYWORDS:

ಜನಪದ ಸಾಹಿತ್ಯ, ಆಧುನಿಕ ಮಾಧ್ಯಮಗಳು, ಸಾಮಾಜಿಕ ಜಾಲತಾಣ, ವ್ಯಾಪಾರೀಕರಣ, ಮೌಖಿಕ ಪರಂಪರೆ.

ಜಾನಪದ ಜನಸಾಮಾನ್ಯರ ದೈನಂದಿನ ಬದುಕಿನಲ್ಲಿ ಸ್ವಾಭಾವಿಕವಾಗಿ ಹುಟ್ಟಿದ ಸಂಸ್ಕೃತಿ. ಕಲೆ, ಸಾಹಿತ್ಯ, ನಂಬಿಕೆ, ಆಚರಣೆ ಮೊದಲಾದವುಗಳ ಸಮೂಹ. ಇಲ್ಲಿ ಜನರ ದಿನನಿತ್ಯದ ಜೀವನ, ನೋವು-ನಲಿವು, ಆಸೆ-ಆಕಾಂಕ್ಷೆಗಳು ಪ್ರತಿಫಲನಗೊಳ್ಳುತ್ತವೆ. ಇದೊಂದು ಸಮೂಹ ಸೃಷ್ಟಿಯ ಸಂಗತಿಯಾಗಿದ್ದು ಸಮುದಾಯದ ಚಿಂತನೆಗಳನ್ನು ಬಿತ್ತರಿಸುತ್ತದೆ. ಸ್ಥಳೀಯ ಸಂಸ್ಕೃತಿಯನ್ನು ಸರಳ ಮತ್ತು ಸಹಜವಾಗಿ ಪ್ರತಿಬಿಂಬಿಸುತ್ತದೆ. ಆಧುನಿಕತೆಯೆಂಬುದು ಸಾಂಪ್ರದಾಯಿಕತೆಯನ್ನು ಮೀರಿ ಹೊಸತನಕ್ಕೆ ತೊಡಗಿಕೊಳ್ಳುವ ಪ್ರಕ್ರಿಯೆ. ಇದು 18ನೇ ಶತಮಾನದ ನಂತರದಲ್ಲಿ ಕಾಣಿಸಿಕೊಂಡ ಬೌದ್ಧಿಕ ಚಳುವಳಿ. ಎಲ್ಲಾ ವಲಯಗಳಲ್ಲಿಯೂ ಆಧುನಿಕತೆಯೆಂಬುದು ಏಕಕಾಲಕ್ಕೆ ವರವೂ, ಶಾಪವೂ ಆಗಿದೆ. ಇದು ಜಾನಪದಕ್ಕೂ ಹೊರತಾಗಿಲ್ಲ. ಹಾಗಾಗಿ ಆಧುನಿಕತೆಯ ಅನುಕೂಲಗಳನ್ನು ಬಳಸಿಕೊಂಡು, ಅನಾನುಕೂಲಗಳನ್ನು ನಿವಾರಿಸಿಕೊಳ್ಳುವ ಮೂಲಕ ಅದನ್ನು ಎದುರುಗೊಳ್ಳುವುದು ಅನಿವಾರ್ಯವಾಗಿದೆ.

ಜಾನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಮೂಲ ಬೇರು. ಇದು ಕಂಠಸ್ಥ ಸ್ತರದಲ್ಲಿ ತಲೆಮಾರುಗಳಿಂದ ತಲೆಮಾರುಗಳಿಗೆ ಸಾಗಿ ಬಂದದ್ದು. ಇದು ಜನ ಜೀವನದ ನಂಬಿಕೆಗಳು, ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಹಾಡು–ಹಸೆ, ಒಗಟು–ಒಡಪು, ಕಥನಗಳು, ಗಾದೆಗಳು, ಆಚರಣೆಗಳ ರೂಪದಲ್ಲಿ ಹಿಂದಿನ ಸಂಸ್ಕೃತಿಯನ್ನು ಜೀವಂತವಾಗಿಸಿರುವ ಜೊತೆಜೊತೆಗೆ ಇಂದಿನ ಸಂಸ್ಕೃತಿಯನ್ನು ಪ್ರಭಾವಿಸುತ್ತಿರುವ ಹಿರಿಮೆ ಜನಪದಕ್ಕೆ ಸಲ್ಲುತ್ತದೆ. ಅದಕ್ಕಾಗಿಯೇ ಬಿ.ಎಂ.ಶ್ರೀ ಅವರು 'ಜನವಾಣಿ ಬೇರು ಕವಿವಾಣಿ ಹೂವು' ಎಂದು ಜನಪದ ಸಾಹಿತ್ಯವನ್ನು ಕರೆದಿದ್ದಾರೆ.

ಜಾನಪದರ ಮೇಲೆ ಆಧುನಿಕತೆಯ ಪ್ರಭಾವ ನೆನ್ನೆ ಮೊನ್ನೆಯದಲ್ಲ. ಹಾಗೆ ನೋಡಿದರೆ ಅದು ತಪ್ಪೂ ಅಲ್ಲ. ಜಾನಪದ ಸಾಹಿತ್ಯದ ವಿಶೇಷತೆಯೇ ಸಾರ್ವಕಾಲಿಕವಾದುದು. ಈ ರೀತಿ ಸಾರ್ವಕಾಲಿಕಗೊಳ್ಳುವ ಸಂದರ್ಭದಲ್ಲಿ ಸಮಕಾಲೀನಗೊಳ್ಳುವುದು ಅಗತ್ಯವೂ ಹೌದು. ಇಲ್ಲವಾದಲ್ಲಿ ಅದು ಹಿನ್ನೆಲೆಗೆ ಸರಿದು ಬಿಡಬಹುದು. ಹಾಗಾಗಿ ಜಾನಪದದ ಎಲ್ಲಾ ಸಂಗತಿಗಳು ಇಂದಿನ ಕಾಲಕ್ಕೆ ಒಗ್ಗಿದಾಗ ಮಾತ್ರ ಅವುಗಳ ಉಳಿವು ಸಾಧ್ಯವಾಗುತ್ತದೆ. ಜನಪದ ಜನಸಾಮಾನ್ಯನ ಬದುಕು, ನಂಬಿಕೆ, ನೋವು, ನಲಿವು, ಆಚರಣೆಗಳನ್ನು ಸಹಜವಾಗಿ ವ್ಯಕ್ತಪಡಿಸುವ ಮಾಧ್ಯಮ. ಮನುಷ್ಯ ನಾಗರಿಕನಾದಂತೆ, ಆಧುನೀಕರಣಕ್ಕೆ ತೆರೆದುಕೊಳ್ಳುತ್ತಾ ಹೋದಂತೆ ಜನಪದದಲ್ಲಿಯೂ ಹಲವು ಪಲ್ಲಟಗಳಾಗಿವೆ. ಜನಪದ ಸಾಹಿತ್ಯದ ಸ್ವರೂಪ, ವ್ಯಾಪ್ತಿ ಮತ್ತು ಪ್ರಸಾರಗಳಲ್ಲಿ ಮಹತ್ವದ ಬದಲಾವಣೆ ಸಂಭವಿಸಿದೆ. ಅದು ನಕಾರಾತ್ಮಕವಾಗಿಯೂ ಹೌದು, ಸಕಾರಾತ್ಮಕವಾಗಿಯೂ ಹೌದು. ಇಂತಹ ಸಂದರ್ಭದಲ್ಲಿ 'ಪರಂಪರೆಯನ್ನು ಸಂಪೂರ್ಣವಾಗಿ ತಳ್ಳಿ ಹಾಕದೆ ಆಧುನಿಕತೆ, ಆಧುನಿಕತೆಯೊಂದಿಗೆ ಸಂಪೂರ್ಣ ಮಡಿವಂತಿಕೆಯನ್ನು ತೋರದೆ ಪರಂಪರೆ ಅನುಸಂಧಾನಗೊಂಡಾಗ ಮಾತ್ರ ಎರಡೂ ಅರ್ಥಪೂರ್ಣಗೊಳ್ಳುತ್ತವೆ.'

ಆಧುನಿಕ ಮಾಧ್ಯಮಗಳಾದ ಮುದ್ರಣ ಯಂತ್ರಗಳು, ರೇಡಿಯೋ, ದೂರದರ್ಶನ, ಸಾಮಾಜಿಕ ಜಾಲತಾಣಗಳು, ಸಿನಿಮಾ ಹಾಗೂ ಡಿಜಿಟಲ್ ಮಾಧ್ಯಮಗಳು, ಜನಪದ ಸಾಹಿತ್ಯದ ಸಂರಕ್ಷಣೆಗೆ ಅಪಾರ ಕೊಡುಗೆಯನ್ನು ನೀಡಿವೆ. ಜನಪದ ಕಥೆಗಳು, ಹಾಡುಗಳು, ನಂಬಿಕೆಗಳು, ಆಚರಣೆಗಳು ಮೊದಲಾದವುಗಳನ್ನು ಹಲವು ರೂಪದಲ್ಲಿ ದಾಖಲಿಸಿ ಉಳಿಸುತ್ತಿವೆ. ವ್ಯಕ್ತಿಯ ಅಂತ್ಯದೊಂದಿಗೆ ಕೊನೆಯಾಗುತ್ತಿದ್ದ ಎಷ್ಟೋ ಜನಪದದ ಸಂಗತಿಗಳು ಇಂದು ದಾಖಲಾಗಿ ಮುಂದಿನ ಪೀಳಿಗೆಗೆ ದಕ್ಕುತ್ತಿರುವುದು ಆಧುನಿಕ ಮಾಧ್ಯಮಗಳಿಂದಾಗಿಯೇ. ಡಿಜಿಟಲ್ ಮಾಧ್ಯಮಗಳ ವ್ಯಾಪಕ ಪ್ರಚಾರದಿಂದಾಗಿ ಇಂದು ಜನಪದಕ್ಕೆ ಹಲವಾರು ವೇದಿಕೆಗಳು ಲಭ್ಯವಾಗುತ್ತಿವೆ. ಸಾವಿರಾರು ಕಲಾವಿದರು ತಮ್ಮೊಳಗಿನ ಕಲೆಯ ಪ್ರದರ್ಶನಕ್ಕೆ ಡಿಜಿಟಲ್ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಬದುಕು ಕಟ್ಟಿಕೊಳ್ಳುವುದರ ಜೊತೆಜೊತೆಗೆ ಜನಪದವನ್ನು ಉಳಿಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಹೀಗೆ ಆಧುನಿಕತೆ ಜನಪದಕ್ಕೆ ಸವಾಲು ಒಡ್ಡುವ ಜೊತೆಜೊತೆಗೆ ಹೊಸ ಹಾದಿ ಮತ್ತು ವೇದಿಕೆಯನ್ನು ಕಲ್ಪಿಸಿದೆ.

ಜನಪದ ಸಮೂಹ ಸೃಷ್ಟಿ ಮತ್ತು ಸಮುದಾಯದ ಸೃಷ್ಟಿ. ಹಾಗಾಗಿ ಸಮಷ್ಟಿ ಪ್ರಜ್ಞೆ ಇಲ್ಲಿ ಮುಖ್ಯವಾಗಿರುತ್ತದೆ. ವ್ಯಷ್ಟಿಗೆ ಇಲ್ಲಿ ಅವಕಾಶವಿರುವುದಿಲ್ಲ. ಆದರೆ ಆಧುನಿಕತೆಯಿಂದಾಗಿ ಸಮಷ್ಟಿ ಪ್ರಜ್ಞೆ ಹೋಗಿ ವೈಯಕ್ತಿಕತೆ ಹೆಚ್ಚಾಗಿ ಜನಪದದಲ್ಲಿ ಇದು ದಟ್ಟವಾಗಿ ಕಾಣಿಸಿಕೊಳ್ಳುತ್ತಿದೆ. ಆಧುನಿಕ ಕೌಟುಂಬಿಕ ವ್ಯವಸ್ಥೆ ಮತ್ತು ಸಾಮಾಜಿಕ ವ್ಯತ್ಯಾಸಗಳಿಂದಾಗಿ ಇಂದು ಅವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚುತ್ತಿದೆ. ಪೋಷಕರು ಮತ್ತು ಮಕ್ಕಳ ನಡುವಿನ ಅಂತರ ಹೆಚ್ಚಾಗಿ ಈ ಹಿಂದೆ ಹಿರಿಯರು ಮತ್ತು ಮಕ್ಕಳ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಜನಪದ ಕಥೆಗಳು, ಒಗಟುಗಳು, ಗಾದೆಗಳು, ಹಾಡುಗಳು ಇಂದು ಕಣ್ಮರೆಯಾಗುತ್ತಿವೆ. ಮಕ್ಕಳು ಮೊಬೈಲ್-ಟಿವಿಗಳಲ್ಲಿ ಉಳಿಯುತ್ತಿದ್ದಾರೆ. ಪರಿಣಾಮವಾಗಿ ಅನಿಮೇಷನ್ ತಂತ್ರಜ್ಞಾನವನ್ನು ಬಳಸಿ ಮಕ್ಕಳಿಗೆ ನೀತಿ ಕಥೆಗಳನ್ನು, ಪುರಾಣದ ಕಥೆಗಳನ್ನು ಹೇಳಲಾಗುತ್ತಿದೆ. ಹೇಳುಗ-ಕೇಳುಗ ಪರಂಪರೆಯು ಪಲ್ಲಟಗೊಂಡು ನೋಡುಗ ಪರಂಪರೆಯು ತಲೆಯೆತ್ತಿದೆ.

ಜನಪದದಿಂದ ಜನರು ದೂರ ಉಳಿಯುತ್ತಿರುವ ಇಂತಹ ಸಂದರ್ಭಗಳಲ್ಲಿ ಆಧುನಿಕ ಆವಿಷ್ಕಾರಗಳು ಜನಪದವನ್ನು ಜನರ ಬಳಿಗೆ ಕರೆತರುವ ಕೆಲಸವನ್ನು ಮಾಡುತ್ತಿರುವುದನ್ನು ಮರೆಯುವಂತಿಲ್ಲ. ಆಧುನಿಕ ತಂತ್ರಜ್ಞಾನಗಳ ನೆರವಿನಿಂದಾಗಿ ಇಂದು ಕೇವಲ ಬಾಯ್ದಾರೆಯಲ್ಲಿದ್ದು ನಂತರ ಕೊನೆಯಾಗುತ್ತಿದ್ದ ಜನಪದ ಲಿಖಿತ, ಧ್ವನಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ದಾಖಲೆಯಾಗಲ್ಪಡುತ್ತಿದೆ. ಮಕ್ಕಳಿಗಾಗಿಯೇ ಇರುವ ಕೆಲವು ಸಾಮಾಜಿಕ ಮಾಧ್ಯಮಗಳು ಜನಪದ ಕಥೆಗಳನ್ನು ಮತ್ತಷ್ಟು ಮನರಂಜನಾತ್ಮಕವಾಗಿ ಮಕ್ಕಳಿಗೆ ಮಾಧ್ಯಮಗಳ ಮೂಲಕ ತಲುಪಿಸುತ್ತಿವೆ. ಹಿಂದೆ ಕೇವಲ ಒಂದು ಊರಿಗೆ, ಒಂದು ಸಂಸ್ಕೃತಿಗೆ ಸೀಮಿತವಾಗಿದ್ದ ಜನಪದ ಕಲಾ ಪ್ರಕಾರಗಳು, ಕಲಾವಿದರು ಆಧುನಿಕತೆಯ ವ್ಯಾಪಕ ಪ್ರಚಾರದಿಂದಾಗಿ ಇಂದು ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿವೆ. ಸ್ಥಳೀಯ ಸಾಂಸ್ಕೃತಿಕ ಕಲೆಗಳಾದ ಡೊಳ್ಳು, ಕಂಸಾಳೆ, ಪಟಕುಣಿತದಂತಹ ಜಾನಪದ ಕಲೆಗಳು ವಿಶ್ವಮಟ್ಟದಲ್ಲಿ ಮಿಂಚುತ್ತಿವೆ. ಜನಪದರಿಗೆ ಹೊಸಬಗೆಯ ಪ್ರೇಕ್ಷಕರು ಹೆಚ್ಚುತ್ತಿದ್ದಾರೆ.

ಆಧುನಿಕ ಸಂಗೀತಕ್ಕೆ ಜನಪದದ ಮೂಲ ಶೈಲಿ ನುಂಗಿಹಾಕಿತೆಂಬ ಅಪವಾದವಿದ್ದರೂ ಅದು ಜನಪದವನ್ನು ಪ್ರಚಾರ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಜನಪದ ಪರಂಪರೆಯ ಎಷ್ಟೋ ಸಾಹಿತ್ಯದ ತುಣುಕುಗಳು ಆಧುನಿಕ ಸಂಗೀತದಿಂದಾಗಿ ಜನರ ಮನಸ್ಸನ್ನು ಗೆದ್ದಿವೆ. ಆಧುನಿಕ ಸಂಗೀತ ಮತ್ತು ಜನಪದದ ಸಂಯೋಗದಿಂದ ನೂರಾರು ಕಲಾವಿದರು ಗುರುತಿಸಲ್ಪಟ್ಟಿದ್ದಾರೆ. ಕಳೆದ ವರ್ಷಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಸದ್ದು ಮಾಡಿದ್ದ 'ಅನ್ಯಾಯಕಾರಿ ಬ್ರಹ್ಮ ಈ ಸುಂದರನ ಸನ್ಯಾಸಿ ಮಾಡಬಹುದೇ' ಈ ಗೀತೆಯ ಹಿನ್ನೆಲೆಯನ್ನು ನೋಡುವುದಾದರೆ ಚಾಮರಾಜನಗರ ಭಾಗದ ಜನಪದ ಹಾಡುಗಳ ಸಂಗ್ರಹವಾದ 'ಅರ್ಜುನ ಜೋಗಿ' ಹಾಡಿನಲ್ಲಿ ಬರುವಂತಹ ಈ ಸಾಲುಗಳು ಅದರ ಕಲಾವಿದನನ್ನು ಮನೆಮಾತಾಗಿಸಿದವು. ಸಾಮಾಜಿಕ ಮಾಧ್ಯಮಗಳಲ್ಲಿ ದಕ್ಕುವ ಪ್ರಚಾರ ಹೊಳೆಯ ನೀರಿನಂತದ್ದು. ಹೇಗೆ ಹೊಸ ನೀರು ಹಳೆ ನೀರಿನ ನೆನಪನ್ನು ಅಳಿಸಿಹಾಕುತ್ತದೆಯೋ ಹಾಗೆ. ಆದರೂ

ಒಂದು ಕಾಲದಲ್ಲಿ ಸಿಕ್ಕ ಪ್ರಚಾರ ಕಲೆ ಮತ್ತು ಕಲಾವಿದನಿಗೆ ಒಂದು ಗುರುತು ನೀಡಿದ್ದನ್ನು ಮರೆಯುವಂತಿಲ್ಲ. ಇದೆಲ್ಲವೂ ಸಾಧ್ಯವಾದುದು ಆಧುನಿಕ ಮಾಧ್ಯಮಗಳ ಪ್ರಭಾವದಿಂದಾಗಿ. ಇತ್ತೀಚಿನ ದಿನಗಳಲ್ಲಿ ಉತ್ತರ ಕರ್ನಾಟಕದ ಜಾನಪದ ಗೀತೆಯ ದಾಟಿಯಲ್ಲಿ ಪ್ರಚಾರವಾಗುತ್ತಿರುವ ಕೆಲವು ಅಶ್ಲೀಲವೆನ್ನಬಹುದಾದ ಗೀತೆಗಳು ಆಧುನಿಕತೆ ಜನಪದಕ್ಕೆ ಹೇಗೆ ಕಂಟಕವಾಗಬಲ್ಲದು ಎಂಬುದಕ್ಕೂ ಸಾಕ್ಷಿಯಾಗಿ ನಿಲ್ಲುತ್ತವೆ. ಇಂಥ ಸಂದಿಗ್ಧ ಸಂದರ್ಭದಲ್ಲಿ ಜನಪದ ಸಾಹಿತ್ಯದ ಮೇಲೆ ಆಧುನಿಕತೆಯ ಪ್ರಭಾವ ಸಮನ್ವಯತೆಯ ನೆಲೆಯಲ್ಲಿ ಉಳಿಯಬೇಕಾದ ಅಗತ್ಯವಿದೆ. ಇದನ್ನು ಸಾಧಿಸಿದರೆ ಜನಪದ ಮತ್ತಷ್ಟು ಅರ್ಥಪೂರ್ಣವಾಗಿ ಮುಂದಿನ ಪೀಳಿಗೆಗೆ ಉಳಿಯಲು ಸಾಧ್ಯವಾಗುತ್ತದೆ.

ಜನಪದ ಸಾಹಿತ್ಯದ ಡಿಜಿಟಲೀಕರಣದಿಂದಾಗಿ ಸಾಮಾಜಿಕ ಮಾಧ್ಯಮಗಳಾದ ಯೂಟ್ಯೂಬ್, ಫೇಸ್‌ಬುಕ್, ವಾಟ್ಸ್‌ಆಪ್ ಮೊದಲಾದವುಗಳು ಜನಪದ ಕಲೆಗಳಿಗೆ ಮತ್ತು ಕಲಾವಿದರಿಗೆ ವಿಶಾಲ ವೇದಿಕೆಯನ್ನು ಕಲ್ಪಿಸಿವೆ. ಇವುಗಳ ಮೂಲಕ ಜನಪದ ಹಾಡುಗಳು, ನೃತ್ಯಗಳು, ನಾಟಕಗಳು, ಆಚರಣೆಗಳು ಮತ್ತು ನಂಬಿಕೆಗಳು ಕ್ಷಣಾರ್ಧದಲ್ಲಿ ಸಾವಿರಾರು ಜನರನ್ನು ತಲುಪುತ್ತಿವೆ. ಇದರಿಂದ ಜನಪದ ಸ್ಥಳೀಯ ವಲಯವನ್ನು ಮೀರಿ ಜಾಗತಿಕವಾಗಿ ಪ್ರಸಾರಗೊಳ್ಳುತ್ತಿದೆ.

ಉದಾಹರಣೆಗೆ: ಡೊಳ್ಳು ಕುಣಿತ. ಡೊಳ್ಳು ಕುಣಿತ ಕರ್ನಾಟಕದ ಪ್ರಮುಖ ಜನಪದ ನೃತ್ಯ ಕಲೆ. ಈ ಹಿಂದೆ ಇದು ಊರಿನ ಹಬ್ಬಗಳು, ಜಾತ್ರೆಗಳು ಮತ್ತು ಧಾರ್ಮಿಕ ಉತ್ಸವಗಳಲ್ಲಿ ಮಾತ್ರ ಪ್ರದರ್ಶನಗೊಳ್ಳುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಡೊಳ್ಳು ಕುಣಿತ ಕೇವಲ ಧಾರ್ಮಿಕ ವಲಯಕ್ಕೆ ಸೀಮಿತವಾಗದೆ ವೇದಿಕೆ ಕಾರ್ಯಕ್ರಮಗಳ ಉದ್ಘಾಟನೆ, ಕಟ್ಟಡ, ಕಚೇರಿಗಳ ಉದ್ಘಾಟನೆ, ಪ್ರಸಿದ್ಧ ವ್ಯಕ್ತಿಗಳ ಮೆರವಣಿಗೆ ಹೀಗೆ ಎಲ್ಲೆಡೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ. ವಿವಿಧ ತಂಡಗಳು ತಮ್ಮ ಪ್ರದರ್ಶನವನ್ನು ಆನ್‌ಲೈನ್‌ನಲ್ಲಿ ಹಂಚಿಕೊಳ್ಳುವ ಮೂಲಕ ಹೆಚ್ಚಿನ ಜನರನ್ನು ತಲುಪುತ್ತಿವೆ. ಹಾಗೆಯೇ ತಮಗೆ ತಾವೇ ಮಾರುಕಟ್ಟೆ ಸೃಷ್ಟಿಸಿಕೊಳ್ಳುತ್ತಿವೆ. ಈ ವಿಸ್ತರಣೆ ಸಾಧ್ಯವಾದುದು ಸಾಮಾಜಿಕ ಮಾಧ್ಯಮಗಳಿಂದಾಗಿ. ಆದರೂ ಜನಪ್ರಿಯತೆಗಾಗಿ ಅತಿಯಾದ ಸಂಗೀತ, ವೇಷಭೂಷಣಗಳು, ಅತಿರೇಕದ ಪ್ರದರ್ಶನಗಳು ಇಂದು ಮೂಲ ಪರಂಪರೆಯ ಶೈಲಿಯನ್ನು ಮಸುಕಾಗಿಸಿರುವುದನ್ನು ತೆಗೆದುಹಾಕುವಂತಿಲ್ಲ.

ಹಿಂದೆಯೆಲ್ಲ ಅವಿಭಕ್ತ ಕುಟುಂಬಗಳಲ್ಲಿ ಮನೆಯ ಹಿರಿಯರು ಮಕ್ಕಳನ್ನು ಕೂರಿಸಿಕೊಂಡು ಕಥೆಗಳನ್ನು ಹೇಳುತ್ತಿದ್ದರು. ಆ ಕಥೆಗಳು ಮಕ್ಕಳಿಗೆ ಮನರಂಜನೆಯನ್ನು ನೀಡುವ ಜೊತೆಜೊತೆಗೆ ಬದುಕಿಗೆ ಬೇಕಾದ ಒಂದಷ್ಟು ನೀತಿಯನ್ನು, ಬೆಳೆವ ಮಕ್ಕಳಲ್ಲಿ ಇರಬೇಕಾದ ಭಯವನ್ನು ಹುಟ್ಟುಹಾಕುತ್ತಿದ್ದವು. ಇಂದು ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿವೆ. 'ಹೂವುಗಳು ನಗರವನ್ನು ಸೇರಿದವು, ಬೇರುಗಳು ಹಳ್ಳಿಗಳಲ್ಲಿಯೇ ಉಳಿದವು' ಎಂಬಂತೆ ಹೊಸ ಪೀಳಿಗೆಯ ಕುಡಿಗಳು ಇಂದು ನಗರಗಳ ಪಾಲಾಗುತ್ತಿವೆ. ಇದರಿಂದ ಸಂಬಂಧಗಳಲ್ಲಿನ ಬಿರುಕಿನ ಜೊತೆಜೊತೆಗೆ ಸಮಾಜದಲ್ಲಿಯೂ

ಬಿರುಕುಗಳು ಸೃಷ್ಟಿಯಾಗುತ್ತಿವೆ. ಸಾಮಾಜೀಕರಣವೆಂಬುದು ಇಂದಿನ ಮಕ್ಕಳಲ್ಲಿ ಕಣ್ಮರೆಯಾಗಿದೆ. ಸಮುದಾಯದೊಂದಿಗಿನ ಮಕ್ಕಳ ಒಡನಾಟ ಕಣ್ಮರೆಯಾಗಿದೆ. ಇದಕ್ಕೆ ಮುಖ್ಯ ಕಾರಣ ಆಧುನೀಕರಣ ಮತ್ತು ಆಧುನಿಕ ಮಾಧ್ಯಮಗಳು. ಇಂದು ಮೂರು ವರ್ಷದ ಮಗುವೂ ಮೊಬೈಲ್, ದೂರದರ್ಶನಗಳಲ್ಲಿ ಬರುವ ಕಾರ್ಟೂನ್‌ಗಳ ಮೋಹಕ್ಕೆ ಸಿಲುಕಿದೆ. ಆಧುನಿಕ ಮಾಧ್ಯಮಗಳು ಗಂಟೆಗಟ್ಟಲೆ ಕುಳಿತು ಕಥೆ ಕೇಳುತ್ತಿದ್ದ, ಸಹಪಾಠಿಗಳೊಂದಿಗೆ, ಸಮವಯಸ್ಕರೊಂದಿಗೆ ಕಾಲ ಕಳೆಯಬೇಕಾಗಿದ್ದ ಮಕ್ಕಳನ್ನು ಕ್ಷಣಾರ್ಧದ ವಿಡಿಯೋ ತುಣುಕಿಗೆ ತಂದು ನಿಲ್ಲಿಸಿವೆ. ಇಂದು ಮೂರು ವರ್ಷದ ಮಗುವೂ ದೀರ್ಘಾವಧಿಯ ವಿಡಿಯೋಗಿಂತ, ಕ್ಷಣಮಾತ್ರದ ವೀಡಿಯೋ ತುಣುಕನ್ನು ಇಷ್ಟಪಡುತ್ತದೆ.

ಇತ್ತೀಚಿನ ದಿನಗಳಲ್ಲಿ ಜನಪದದ ವ್ಯಾಪಾರೀಕರಣವು ಜನಪದ ಕಲಾವಿದರಿಗೆ ಆದಾಯದ ಅವಕಾಶಗಳನ್ನು ಹೆಚ್ಚಿಸಿವೆ. ಧಾರ್ಮಿಕ ಉತ್ಸವಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಮಾಧ್ಯಮಗಳು, ಟಿ.ವಿ ಶೋಗಳು ಜನಪದ ಕಲೆಗಳನ್ನು ಜನಪ್ರಿಯಗೊಳಿಸುತ್ತಿವೆ. ಇದರಿಂದ ಜನಪದಕ್ಕೆ ಮತ್ತಷ್ಟು ಪ್ರಚಾರ ಸಿಕ್ಕು ಜನಮಾನಸದಲ್ಲಿ ಮರೆತುಹೋಗದೆ ಉಳಿಯಲು ಸಾಧ್ಯವಾಗಿದೆ. ಆದರೆ ಇದೇ ವ್ಯಾಪಾರೀಕರಣ ಪ್ರವೃತ್ತಿಯಿಂದಾಗಿ ಜನಪದಕ್ಕೆ ಗಂಭೀರ ಅಪಾಯಗಳು ಎದುರಾಗಿವೆ. ಜನಪದ ಎಂಬುದು ಕೇವಲ ಪ್ರದರ್ಶನವಲ್ಲ. ಅದು ಒಂದು ಸಂಸ್ಕೃತಿ. ಅದು ಹಾಡಾಗಿರಲಿ, ಕಥೆಯಾಗಿರಲಿ, ಒಗಟು-ಗಾದೆ, ಅಡುಗೆ, ವೈದ್ಯ, ಪ್ರದರ್ಶನ ಕಲೆಯಾಗಿರಲಿ ಅದರ ಹಿಂದೆ ಒಂದು ಪ್ರಾದೇಶಿಕತೆ ಇರುತ್ತದೆ. ಒಂದು ನಂಬಿಕೆ, ಸಂಪ್ರದಾಯಗಳೂ ಮೇಳವಿಸಿರುತ್ತವೆ. ಆ ಸಂಗತಿಗೂ ಸಮುದಾಯಕ್ಕೂ ಒಂದು ಸಂಬಂಧವಿರುತ್ತದೆ. ಆದರೆ ಯಾವುದೇ ಲಾಭದ ದೃಷ್ಟಿಯಿಂದ ಜನಪದವನ್ನು ರೂಪಾಂತರಿಸಿದಾಗ ಅದರ ಮೂಲ ಸ್ವರೂಪ, ಅರ್ಥ ಮತ್ತು ಮೌಲ್ಯಗಳು ಮಸುಕಾಗುತ್ತವೆ. ಜನಪದ ವಸ್ತುಗಳು ಕೇವಲ ಮನರಂಜನೆಯ ವಸ್ತುವಾಗಿಬಿಟ್ಟರೆ ಸಮುದಾಯದ ಕೊಂಡಿ ಕಳಚುತ್ತದೆ.

ಉದಾಹರಣೆಗೆ: ಯಕ್ಷಗಾನ. ಯಕ್ಷಗಾನ ಕರ್ನಾಟಕದ ಪ್ರಸಿದ್ಧ ಜನಪದ ನೃತ್ಯ-ನಾಟಕ ಕಲೆ. ಹಿಂದೆ ಯಕ್ಷಗಾನವು ಹಳ್ಳಿಯ ಜಾತ್ರೆ, ದೇವಾಲಯದ ಉತ್ಸವಗಳು, ಸಮುದಾಯದ ಕಾರ್ಯಕ್ರಮಗಳಲ್ಲಿ ನಡೆಯುವ ಧಾರ್ಮಿಕ-ಸಾಂಸ್ಕೃತಿಕ ಪ್ರದರ್ಶನವಾಗಿತ್ತು. ಇಲ್ಲಿ ಪ್ರದರ್ಶನಗೊಳ್ಳುವ ಪೌರಾಣಿಕ ಕಥೆಗಳು, ವೇಷಭೂಷಣ, ಸಂಪ್ರದಾಯಬದ್ಧ ಸಂಗೀತ ಮತ್ತು ಸಂಭಾಷಣೆಗಳಿಂದಾಗಿ ಇದಕ್ಕೆ ಹೆಚ್ಚಿನ ಮಹತ್ವವಿತ್ತು. ರಾತ್ರಿಯಿಡೀ ಜನ ಇದನ್ನು ಕುಳಿತು ಕೇಳುತ್ತಿದ್ದರು. ಆದರೆ ಆಧುನಿಕ ಸಮೂಹ ಮಾಧ್ಯಮಗಳು ಮತ್ತು ಜೀವನ ಪದ್ಧತಿಯಿಂದಾಗಿ ಇಂದು ಯಕ್ಷಗಾನದ ಬಗ್ಗೆ ಜನರ ಆಸಕ್ತಿ ಕಡಿಮೆಯಾಗುತ್ತದೆ. ಕಾಲಕ್ಕೆ ತಕ್ಕಂತೆ ಹೊಸತನವನ್ನು ರೂಢಿಸಿಕೊಂಡು, ವಾಣಿಜ್ಯ ವೇದಿಕೆಗಳಿಗಾಗಿ ಸಂಕ್ಷಿಪ್ತಗೊಳಿಸಿಕೊಂಡು, ಜನರ ಗಮನ ಸೆಳೆಯಲು ಸಮಕಾಲೀನ ಸಂಗೀತ, ಸಂಭಾಷಣೆ, ಬೆಳಕುಗಳನ್ನು ಒಳಗೊಂಡರೂ ಯಕ್ಷಗಾನ ಇಂದು ಆಳವಾಗಿ ಜನಮಾನಸವನ್ನು ಮುಟ್ಟಲು ತಿಣುಕುತ್ತಿದೆ.

ರಾತ್ರಿಯಿಡೀ ಪೌರಾಣಿಕ ನಾಟಕಗಳು, ಯಕ್ಷಗಾನ, ಬಯಲಾಟಗಳಂತಹ ಪ್ರದರ್ಶನಗಳನ್ನು ಕುಳಿತು ನೋಡುತ್ತಿದ್ದ ಜನರ ವ್ಯವಧಾನ ಇಂದು ಕಣ್ಮರೆಯಾಗುತ್ತಿದೆ. ಧಾರ್ಮಿಕ ಉತ್ಸವಗಳಲ್ಲಿಯೋ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೋ ಇಂತಹ ಪ್ರದರ್ಶನಗಳು ಏರ್ಪಟ್ಟರೂ ಅದರ ಪ್ರೇಕ್ಷಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಹತ್ತಾರು ಗಂಟೆಗಳ ನಾಟಕ, ಯಕ್ಷಗಾನದಂತಹ ಪ್ರದರ್ಶನಗಳಿಗಿಂತ ಮೂರು ಗಂಟೆಗಳ ಸಿನಿಮಾಗಳು ಇಂದು ಜನರನ್ನು ಆಕರ್ಷಿಸುತ್ತಿವೆ. ಮೊಬೈಲ್ ಫೋನುಗಳಲ್ಲಿರುವ ಸಮೂಹ ಮಾಧ್ಯಮಗಳು ಅವರನ್ನು ಹಿಡಿದಿಟ್ಟಿವೆ. ಇಂತಹ ಸಂದರ್ಭದಲ್ಲಿ ಯಾವುದೇ ಹೊಸತನವನ್ನು ಅಳವಡಿಸಿಕೊಂಡರೂ ಇಂದು ಹಲವಾರು ಜಾನಪದ ಪ್ರದರ್ಶನ ಕಲೆಗಳು ಪ್ರೇಕ್ಷಕರಿಲ್ಲದೆ ಮೂಲೆಗುಂಪಾಗುತ್ತಿವೆ.

ಸ್ಥಳೀಯತೆ ಜನಪದದ ಪ್ರಮುಖ ವೈಶಿಷ್ಟ್ಯತೆ. ಆದರೆ ವ್ಯಾಪಾರೀಕರಣದಿಂದ ಜನಪದದ ಈ ಸ್ಥಳೀಯತೆ ಕಳೆದುಹೋಗುವ ಆತಂಕವೂ ಇದೆ. ಸಮಯವನ್ನು ಗುಣಾಕಾರದ ಲೆಕ್ಕದಲ್ಲಿ ಓಡಿಸುತ್ತಿರುವ ಇಂದಿನ ದಿನಗಳಲ್ಲಿ ಜನಪದ ಕಲೆಗಳ ಪ್ರದರ್ಶನದ ಸಂದರ್ಭದಲ್ಲಿ ಆ ಕಲೆಯ ಪೂರ್ವಾಪರಗಳನ್ನು ಪ್ರೇಕ್ಷಕನಿಗೆ ತಿಳಿಸುವ ವ್ಯವಧಾನವಿಲ್ಲ. ಪರಿಣಾಮವಾಗಿ ಇಂದು ಜನಪದ ಕಲೆಗಳ ವಿಶ್ವವ್ಯಾಪಿ ಪ್ರದರ್ಶನ ಅವುಗಳ ವೈವಿಧ್ಯತೆಯನ್ನು ನುಂಗಿಹಾಕುತ್ತಿವೆ. ಒಂದೇ ಜನಪದ ರೂಪವನ್ನು ಎಲ್ಲೆಡೆ ಪ್ರದರ್ಶಿಸುವುದರಿಂದ ಅದರ ಪ್ರಾದೇಶಿಕತೆ ನಾಶವಾಗುತ್ತಿದೆ. ಹಾಗಾಗಿ ಜನಪದ ಮತ್ತು ವ್ಯಾಪಾರೀಕರಣದ ನಡುವೆ ಸಮತೋಲನವನ್ನು ಕಾಪಾಡುವುದು ಅಗತ್ಯವಾಗಿದೆ. ವ್ಯಾಪಾರೀಕರಣವು ಜನಪದಕ್ಕೆ ಆರ್ಥಿಕ ಆಸರೆಯನ್ನು ನೀಡಬಹುದು. ಅದರ ಜೊತೆಜೊತೆಗೆ ಅದರ ಅಸಲಿ ರೂಪವನ್ನು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಕಾಪಾಡಿಕೊಂಡು ನಡೆಯಬೇಕಾದ ತುರ್ತು ಇದೆ.

**ಪರಾಮರ್ಶನ ಗ್ರಂಥ:**

1. ವೀರಣ್ಣ ದಂಡೆ, (2007), ಜನಪದ ಕಾವ್ಯ ಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು, ಕಲಬುರಗಿ: ಲಕ್ಷ್ಮಿ ಮುದ್ರಣಾಲಯ.
2. ರಾಜಶೇಖರ ಪಿ.ಕೆ., (2003), ಜಾನಪದ ಸಂಭ್ರಮ, ಮೈಸೂರು: ಶ್ರೀ ರಾಜೇಂದ್ರ ಪ್ರಿಂಟರ್ಸ್.
3. ಚಂದ್ರಶೇಖರ ಕಂಬಾರ, (2011), ದೇಶೀಯ ಚಿಂತನ, ಬೆಂಗಳೂರು: ಅಂಕಿತ ಪುಸ್ತಕ.